# 2019-20ನೇ ಸಾಲಿನ ಎನ್.ಎಸ್.ಎಸ್. ವಾರ್ಷಿಕ ವರದಿ

ದಿನಾಂಕ 12-07-2019ರಂದು ಪ್ರಾಂಶುಪಾಲರಾದ ಪ್ರೊ. ಶಿವಶಂಕರ್ ಪ್ರಸಾದ್ ಕೆ.ಆರ್ ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಎನ್.ಎಸ್.ಎಸ್. ಸಲಹಾ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯಲ್ಲಿ ಪ್ರೊ. ಸಣ್ಣೀರಯ್ಯ ಎಸ್., ಪ್ರೊ. ತರನಂ ನಿಖತ್, ಡಾ. ವಿಜಯೇಂದ್ರ ಕುಮಾರ್ ಜಿ.ಎಲ್., ಡಾ. ಕೃಷ್ಣಪ್ಪ ಕೆ.ಎನ್., ಡಾ. ಕೃಷ್ಣೇಗೌಡ ಬಿ.ಎಸ್., ಪ್ರೊ. ವಿ. ಕೋನಕುಂಟ್ಲ ರಾಯಪ್ಪ, ಪ್ರೊ. ಹನುಮಂತರೆಡ್ಡಿ ಪ್ರೊ. ಶ್ರೀದೇವಿ, ಇವರನ್ನು ಸಲಹಾ ಸಮಿತಿಯ ಸದಸ್ಯರಾಗಿ, ಹಾಗು ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಚಂದ್ರಶೇಖರ ಸಿ.ರವರನ್ನು ಎನ್.ಎಸ್.ಎಸ್ ಘಟಕ ಒಂದರ ಸಂಚಾಲಕರಾನ್ನಾಗಿ ನೇಮಿಸಲಾಯಿತು. ಘಟಕ-2ರ ಕಾರ್ಯಕ್ರಮಾಧಿಕಾರಿಯಾಗಿ ಗಣಿತ ವಿಭಾಗದ ಪ್ರೊ. ರತ್ನಮ್ಮ ಕೆ.ವಿ ರವರನ್ನು ಮತ್ತು ಪ್ರೊ. ಚಂದ್ರಶೇಖರ್ ಕೆ, ಪ್ರೊ. ಕೆಂಪರಾಜು, ಡಾ. ರಘು ಎಮ್.ಎನ್, ಪ್ರೊ. ನವೀನ್ ಕುಮಾರ್, ಪ್ರೊ. ಪ್ರಮೀಳ ಎಸ್, ಡಾ. ಸಣ್ಣ ಚಿಕ್ಕಯ್ಯ, ಡಾ. ತಿಮ್ಮಾರೆಡ್ಡಿ ಜಿ. ಪ್ರೊ. ಕೃಷ್ಣಪ್ಪ ಕೆ.ಟಿ, ಶಿವಕುಮಾರ್ ಮತ್ತು ಶಿಲ್ಪರವರನ್ನು ಸದಸ್ಯರನ್ನಾಗಿ ನೇಮಕಮಾದಲಾಯಿತು.

ದಿನಾಂಕ : 13.7.2019ರಂದು 2019-20ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಗೆ ಸ್ವಯಂಸೇವಕಿಯರನ್ನು ಹೊಸದಾಗಿ ದಾಖಲಾತಿ ಮತ್ತು ನವೀಕರಣ ಮಾಡಲಾಯಿತು. ದಿನಾಂಕ : 20-07-2019 ರಂದು ಶೈಕ್ಷಣಿಕ ವರ್ಷಾರಂಭದ ಸಲುವಾಗಿ ಕಾಲೇಜಿನ ಪ್ರಾಂಶುಪಾಲರು 2019-20ನೇ ಸಾಲಿನ ಎನ್.ಎಸ್.ಎಸ್. ಚಟುವಟಿಕೆಗಳಿಗೆ ಚಾಲನೆ ನೀಡಿದರು. ಅದೇ ದಿನದಂದು ಹೊಸದಾಗಿ ಸೇರ್ಪಡೆಯಾದ ಮೊದಲನೇ ವರ್ಷದ ಸ್ವಯಂ ಸೇವಕರಿಗೆ ಎನ್.ಎಸ್.ಎಸ್.ನ ಧ್ಯೇಯ, ಉದ್ದೇಶ, ಶ್ರಮದಾನದ ಬಗ್ಗೆ ಪುನರ್ ಮನನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ದಿನಾಂಕ : 24.09.2019 ರಂದು ರಾಷ್ಟ್ರೀಯ ಸೇವಾ ಯೋಜನೆಯ 50ನೇ ಸಂಸ್ಥಾಪನಾ ದಿನಾಚರಣೆ ಮತ್ತು ಮಹಾತ್ಮ ಗಾಂಧೀಜಿ ಅವರ 150ನೇ ಜನ್ಮದಿನಾಚರಣೆಯನ್ನು ಆಚರಿಸಲಾಯಿತು. ಪ್ರಾಂಶುಪಾಲರಾದ ಕೆ.ಆರ್. ಶಿವಶಂಕರ್ ಪ್ರಸಾದ್‌ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೋ. ತಿಮ್ಮರಾಯಪ್ಪ ವಿ.ರವರು ಮಾತನಾಡುತ್ತಾ ಎನ್.ಎಸ್.ಎಸ್. ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಸಮುದಾಯದ ಜೊತೆಗೆ ಸಹಭಾಗಿತ್ವವನ್ನು ಕಲಿಸುತ್ತದೆ. ಸಮಾಜದ ವಿವಿಧ ಮಜಲುಗಳನ್ನು ಕಲಿಸಿತ್ತದೆ. ಆದ್ದರಿಂದಲೇ ಇಂದು ಎನ್.ಎಸ್.ಎಸ್.ಗೆ ವಿಶಿಷ್ಟವಾದ ಸ್ಥಾನವಿದೆ. ವಿದ್ಯಾರ್ಥಿಗಳಿಗೆ ಎನ್.ಎಸ್.ಎಸ್. ಉತ್ತಮ ನಾಯಕತ್ವದ ಗುಣಗಳನ್ನು ಬೆಳೆಸುತ್ತದೆ ಎಂದು ತಿಳಿಸಿದರು. ಕೆ.ಎನ್. ಕೃಷ್ಣಪ್ಪ ಸ್ವಾಗತಿಸಿದರು, ಡಾ. ವಿಜಯೇಂದ್ರಕುಮಾರ್ ಜಿ.ಎಲ್. ನಿರೂಪಿಸಿದ್ದರು, ಪ್ರೊ. ಚಂದ್ರಶೇಖರ ಸಿ.ರವರು ವಂದಿಸಿದರು. ದಿನಾಂಕ : 25.09.2019ರ ಮಂಗಳವಾರ ಎನ್.ಎಸ್.ಎಸ್. ಮತ್ತು ಸ್ಕೌಟ್ಸ್ & ಗೈಡ್ಸ್ ಸಹಯೋಗದೊಂದಿಗೆ ರಾಷ್ಟೀಯ ಜಂತುಹುಳ ನಿವಾರಣಾ ದಿನದ ಸಲುವಾಗಿ ಜಾತ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ನಂತರ ಪಾಲಿಟೆಕ್ನಿಕ್ ಕಾಲೇಜಿನ ಮೈದಾನದ ಸುತ್ತಾ ಗಿಡಗಳನ್ನು ನೆಡಲಾಯಿತು.

08-03-2020 ರಿಂದ 14-03-2020ರ ವರೆಗೆ ಎನ್.ಎಸ್.ಎಸ್. ಘಟಕ-1 ಮತ್ತು ಘಟಕ-2ರ ವತಿಯಿಂದ 2019-20ರ ಶೈಕ್ಷಣಿಕ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ನಮ್ಮ ಕಾಲೇಜಿನಿಂದ ಕೈವಾರ ಹೋಬಳಿ ಮುನಗನಹಳ್ಳಿ ಗ್ರಾಮ ಪಂಚಾಯತಿಯ ಆಲಂಬಗಿರಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು. ಅಲ್ಲಿಯ ಗುರುಮೂರ್ತೇಶ್ವರ ಕಲ್ಯಾಣ ಮಂಟಪದ ಸುಂದರ ಪ್ರಶಾಂತ ವಾತಾವರಣದಲ್ಲಿ ನೆಲೆಸಿ, ಆ ಗ್ರಾಮವಷ್ಟೇ ಅಲ್ಲದೆ ಸುತ್ತ ಮುತ್ತಲ್ಲಿನ ಹಳ್ಳಿಗಳಾದ ಎ.ಹೊಸಹಳ್ಳಿ ಮತ್ತು ಬಿಟ್ಟಗಾನಹಳ್ಳಿಗಳಿಗೆ ಭೇಟಿ ಕೊಟ್ಟು ಶ್ರಮದಾನ, ಪರಿಸರ ಸಂರಕ್ಷಣೆ, ಸಾಂಕ್ರಾಮಿಕ ರೋಗಗಳ ಬಗ್ಗೆ ಅರಿವು ಮತ್ತು ಸ್ವಚ್ಛತಾ ಕಾರ್ಯಕ್ರಮಗಳನ್ನು ನಿರ್ವಹಿಸಲಾಯಿತು. ಪ್ರತಿ ದಿನ 4 ಘಂಟೆಗೆ ವಿವಿಧ ವಿಷಯಗಳ ಕುರಿತು ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು, ಕಾನೂನು ಮತ್ತು ಯುವಜನತೆ, ಮಹಿಳಾ ಸಬಲೀಕರಣ, ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳೆಯರು, ಸಂವಿಧಾನ ಮತ್ತು ಪೌರತ್ವ, ಪರಿಸರ ಮಾಲಿನ್ಯ ತಡೆಯುವಲ್ಲಿ ಜೈವಿಕ ಇಂಧನಗಳ ಪಾತ್ರ, ಆರೋಗ್ಯ ರಕ್ಷಣೆ, ಪರಿಸರ ಸಂರಕ್ಷಣೆ ಮೊದಲಾದ ವಿಷಯಗಳ ಬಗ್ಗೆ ವಿಶೇಷ ಉಪನ್ಯಾಸ, ಪಶು ಆರೋಗ್ಯ ಮತ್ತು ಫಲೀಕರಣ ಶಿಬಿರ ಮತ್ತು ಜನರ ಆರೋಗ್ಯ ತಪಾಸಣಾಶಿಬಿರ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ಶಿಬಿರದ ಉದ್ಘಾಟನಾ ಸಮಾರಂಭವನ್ನು ಮಧ್ಯಾಹ್ನ 12.00 ಗಂಟೆಗೆ ಮುನಗನಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಸುಮ ನಂಜರೆಡ್ಡಿರವರು ಜ್ಯೋತಿಯನ್ನು ಬೆಳಗಿಸುವುದರ ಮುಖಾಂತರ ನೆರವೇರಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಶಿವಶಂಕರ್

ಪ್ರಸಾದ್ ಕೆ.ಆರ್.ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ ಸುಮಾರು 7 ದಿನಗಳ ಕಾಲ ಆಲಂಬಗಿರಿ ಗ್ರಾಮದಲ್ಲಿ ನೆಲೆಸಿ ಶಿಬಿರಾರ್ಥಿಗಳು ಯಾವ ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು? ಹಳ್ಳಿಗಳನ್ನು ಕಾಡುತ್ತಿರುವ ಸಮಸ್ಯೆಗಳ ಬಗ್ಗೆ ಯಾವ ರೀತಿಯಲ್ಲಿ ಅಧ್ಯಯನ ನಡೆಸಬೇಕು? ಅಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಹೇಗೆ? ಹಳ್ಳಿಯ ಸಮಸ್ತ ಜನರ ಸಹಕಾರವನ್ನು ಪಡೆದುಕೊಂಡು ಸಮಾಜ ಸೇವಾ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುವುದು ಹೇಗೆ? ಎಂಬುದರ ಕುರಿತು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಇದೇ ಸಂದರ್ಭದಲ್ಲಿ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಕೆ. ಚಂದ್ರಶೇಖರ್ ಅವರು ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಘಟಕ-2ರ ಸಹಾಯಕ ಶಿಬಿರಾಧಿಕಾರಿ ಮತ್ತು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ.ಎಲ್. ವಿಜಯೇಂದ್ರಕುಮಾರ್ ರವರು ನಿರೂಪಿಸಿದರು, ಎನ್.ಎಸ್.ಎಸ್. ಘಟಕ-1ರ ಶಿಬಿರಾಧಿಕಾರಿಗಳಾದ ಪ್ರೊ. ಚಂದ್ರಶೇಖರ ಸಿ.,ರವರು ಶಿಬಿರದ ಉದ್ದೇಶ, ಗುರಿ ಮತ್ತು ರಾಷ್ಟ್ರೀಯ ಸೇವಾ ಯೋಜನೆಯ ಮಹತ್ವವನ್ನು ತಿಳಿಸುತ್ತಾ ಎಲ್ಲರಿಗೂ ಸ್ವಾಗತ ಕೋರಿದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಕೆ.ಎನ್. ಕೃಷ್ಣಪ್ಪ ರವರು ರವರು ವಂದಿಸಿದರು.

ನಂತರ ಸಂಜೆ 7 ಗಂಟೆಗೆ ಮತ್ತೆ ಎಲ್ಲಾ ಶಿಬಿರಾರ್ಥಿಗಳನ್ನು ಒಟ್ಟುಗೂಡಿಸಿ ತಂಡಗಳನ್ನು ಮಾಡಿ ಆ ತಂಡಗಳಿಗೆ ಹೆಸರುಗಳನ್ನು ನೀಡಿ ತಂಡದ ನಾಯಕಿಯರುಗಳನ್ನು ಸಹ ನೇಮಿಸಲಾಯಿತು. ತಂಡಗಳಿಗೆ ಪ್ರತಿ ದಿನದ ಕಾರ್ಯಕ್ರಮಗಳನ್ನು ಮನವರಿಕೆ ಮಾಡಿಕೊಡಲಾಯಿತು. ಆಯಾ ದಿನದ ಜವಾಬ್ದಾರಿಗಳನ್ನು ಆಯಾ ತಂಡಗಳಿಗೆ ವಹಿಸಿಕೊಡಲಾಯಿತು.

**ಶಿಬಿರದ ಎರಡನೇ ದಿನದ ವರದಿ :** ದಿನಾಂಕ 09-03-2020 ರಂದು ಬೆಳಗ್ಗೆ 6.15 ಕ್ಕೆ ಧ್ವಜಾರೋಹಣವನ್ನು ಗಂಗಾಧರ್ ಎನ್. ಶಿಕ್ಷಕರು ಆಲಂಬಗಿರಿ ರವರ ನೇತೃತ್ವದಲ್ಲಿ ನೆರವೇರಿಸಲ್ಪಟ್ಟಿತು. ನಂತರ ಸೇವಾಗೀತೆ, ಓಂಕಾರಮಂತ್ರ ಮತ್ತು ರಾಷ್ಟ್ರಗೀತೆಯೊಂದಿಗೆ ದಿನದ ಕಾರ್ಯಕ್ರಮಗಳ ಆರಂಭವಾಯಿತು. ನಂತರ ದೈಹಿಕ ಶಿಕ್ಷಣವನ್ನು ಚಂದ್ರಶೇಖರ್ ಸಿ. ಮತ್ತು ಶಿಬಿರಾರ್ಥಿ ಕುಮಾರಿ ವಸುಪ್ರಧ ರವರು ಯೋಗಭ್ಯಾಸವನ್ನು ನಡೆಸಿಕೊಟ್ಟರು.

**ಶ್ರಮದಾನ :** ಈ ದಿನ ಶ್ರಮದಾನವನ್ನು ಆಂಜನೇಯಸ್ವಾಮಿ ದೇವಾಲಯ ಮತ್ತು ದೇವಾಲಯದ ಸುತ್ತಮುತ್ತಲಿನ ಆವರಣ, ಪುಷ್ಕರಣಿ ಮತ್ತು ಊರಿನ ಬೀದಿಗಳನ್ನು ಸ್ವಚ್ಛಗೊಳಿಸಲಾಯಿತು.

**ಉಪನ್ಯಾಸ :** ದಿನದ ಉಪನ್ಯಾಸ ಕಾರ್ಯಕ್ರಮ ಸರಿಯಾಗಿ 4 ಗಂಟೆಗೆ ಆರಂಭವಾಯಿತು. ವಿಷಯ **"ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳೆಯರು"**. ಶ್ರೀ ಕಾಗತಿ ವೆಂಕಟಾಚಲಪತಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ನಾರೇಮದ್ದೇಪಲ್ಲಿ ಗ್ರಾಮ ಪಂಚಾಯಿತಿ., ಬಾಗೇಪಲ್ಲಿ ತಾಲ್ಲೂಕು, ಇವರು ವಿಶೇಷ ಉಪನ್ಯಾಸ ನೀಡಿದರು.

**ಶಿಬಿರದ ಮೂರನೆಯ ದಿನ :** ದಿನಾಂಕ 10-03-2020 ಮಂಗಳವಾರ ಶಿಬಿರದ ಮೂರನೆ ದಿನ ಬೆಳಗ್ಗೆ 6.15ಕ್ಕೆ ಸರಿಯಾಗಿ ಎಂ. ಮಂಜುನಾಥ ಕಾರ್ಯದರ್ಶಿ ಹಾಲು ಉತ್ಪಾದಕ ಸಹಕಾರ ಸಂಘ ಆಲಂಬಗಿರಿ. ಇವರು ಧ್ವಜಾರೋಹಣ ಮಾಡಿದರು.

**ಶ್ರಮದಾನ :** ಎ.ಹೊಸಹಳ್ಳಿ ಗ್ರಾಮ ಮತ್ತು ಗ್ರಾಮದ ವೇಣುಗೋಪಾಲಸ್ವಾಮಿ ದೇವಾಲಯದ ಸುತ್ತಮುತ್ತಲಿನ ಆವರಣವನ್ನು ಸ್ವಚ್ಛಗೊಳಿಸುವುದರ ಮೂಲಕ ಶ್ರಮದಾನವನ್ನು ಮಾಡಲಾಯಿತು.

**ಉಪನ್ಯಾಸ :** ಈ ದಿನದ ಮುಖ್ಯ ವಿಷಯ **"ಪರಿಸರ ಮಾಲಿನ್ಯ ತಡೆಯುವಲ್ಲಿ ಜೈವಿಕ ಇಂಧನಗಳ ಪಾತ್ರ"**. ಈ ವಿಷಯದ ಬಗ್ಗೆ ಸಂಪನ್ಮೂಲ ವ್ಯಕ್ತಿಯಾಗಿ ಕೆ.ಸಿ.ವೆಂಕಟೇಶಪ್ಪ ವೈಜ್ಞಾನಿಕ ಸಹಾಯಕರು, ಜೈವಿಕ ಇಂಧನ ಸಂಶೋಧನಾ ಮಾಹಿತಿ ಮತ್ತು ಪ್ರಾತ್ಯಕ್ಷಿಕೆ ರೇಷ್ಮೆ ಕೃಷಿಮಹಾವಿದ್ಯಾಲಯ, ಚಿಂತಾಮಣಿ, ಇವರು ಉಪನ್ಯಾಸ ನೀಡಿದರು.

**ಸಾಂಸ್ಕೃತಿಕ ಕಾರ್ಯಕ್ರಮಗಳು :** ಜಾನಪದ ಹುಂಜ ಶ್ರೀ ನಾರಮಾಕಲಹಳ್ಳಿ ಜಿ. ಮುನಿರೆಡ್ಡಿ ಯವರು ನಡೆಸಿಕೊಟ್ಟರು.

**ಶಿಬಿರದ ನಾಲ್ಕನೇ ದಿನ :** ದಿನಾಂಕ 11-03-2020ರ ಬುಧವಾರ 6.15ಕ್ಕೆ ಸರಿಯಾಗಿ ಧ್ವಜಾರೋಹಣ ಕಾರ್ಯಕ್ರಮವನ್ನು ಮುನಗನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರಾದ ವನಜಮ್ಮ ವೆಂಕಟೇಶ್ ರವರು ನೆರವೇರಿಸಿದರು.

**ಶ್ರಮದಾನ :** ದಿನಾಂಕ 11.03.2020 ರಂದು ಆಲಂಬಗಿರಿ ಗ್ರಾಮದಲ್ಲಿ ಸರ್ಕಾರಿ ಮಹಿಳಾ ಕಾಲೇಜಿನ ಎನ್.ಎಸ್.ಎಸ್. ವತಿಯಿಂದ ಉಚಿತ ಆರೋಗ್ಯ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಬೆಳಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 2.30 ಗಂಟೆಯವರೆಗೆ ನಡೆದ ಆರೋಗ್ಯ ಶಿಬಿರದಲ್ಲಿ ಆಲಂಬಗಿರಿ, ಬಿಟ್ಟಗಾನಹಳ್ಳಿ ಮತ್ತು ಎ.ಹೊಸಹಳ್ಳಿ ಗ್ರಾಮಸ್ಥರು ಹಾಗೂ ಕಾಲೇಜಿನ ಘಟಕ 1 ಮತ್ತು ಘಟಕ 2ರ ಎನ್.ಎಸ್.ಎಸ್. ಶಿಬಿರಾರ್ಥಿಗಳು ಇದರ ಪ್ರಯೋಜನವನ್ನು ಪಡೆದುಕೊಂಡರು. ಸಾಂಕ್ರಾಮಿಕವಲ್ಲದ ರೋಗಗಳಾದ ಸಕ್ಕರೆ ಕಾಯಿಲೆ, ರಕ್ತದೊತ್ತಡದಂತಹ ಸಮಸ್ಯೆಗಳಿಗೆ ತಪಾಸಣೆ ಮತ್ತು ಚಿಕಿತ್ಸೆ ನೀಡಲಾಯಿತು. ಅನೀಮಿಯಾ ಮುಕ್ತ ಭಾರತ ಕಾರ್ಯಕ್ರಮದ ಅಡಿಯಲ್ಲಿ ಗರ್ಭಿಣಿಯರಿಗೆ ವೈದ್ಯಕೀಯ ತಪಾಸಣೆ

ಮತ್ತು ರಕ್ತ ಪರೀಕ್ಷೆ: ಕಿಶೋರಿಯರಿಗೆ ವೈದ್ಯಕೀಯ ತಪಾಸಣೆ ಮತ್ತು ರಕ್ತ ಪರೀಕ್ಷೆ: ಅಂಗನವಾಡಿ ಮಕ್ಕಳಿಗೆ ಆರೋಗ್ಯ ತಪಾಸಣೆ ಮಾಡಲಾಯಿತು.

ವೈದ್ಯರಾದ ಡಾ. ಜಿಲಾನಿ, ಡಾ. ಸಂಧ್ಯಾ ಕಿರಿಯ ಆರೋಗ್ಯ ಮಹಿಳಾ ಸಹಾಯಕಿಯರಾದ ಶ್ರೀಮತಿ ವರಲಕ್ಷ್ಮಿ, ಆಶಾಕಾರ್ಯಕರ್ತೆಯರಾದ ನಾಗಮಣಿ, ಕಮಲ, ಇವರುಗಳ ಸಹಕಾರದಿಂದ ಆರೋಗ್ಯ ಶಿಬಿರ ಯಶಸ್ವಿಯಾಗಿ ನೆರವೇರಿತು.

**ಉಪನ್ಯಾಸ** : ಸಂಜೆ 4.00 ಗಂಟೆಗೆ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮುನಗನಹಳ್ಳಿ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಕವಿತ ಅವರು ಮಾತನಾಡುತ್ತಾ, ಕೌಟುಂಬಿಕ ಚೌಕಟ್ಟಿನಲ್ಲಿದ್ದು ಕೊಂಡೇ ಹೆಣ್ಣು ಶಿಕ್ಷಣವನ್ನು ಪಡೆದುಕೊಳ್ಳುವುದರ ಜೊತೆಗೆ ಸಮಾಜದ ಎಲ್ಲ ಕ್ಷೇತ್ರಗಳಲ್ಲಿಯೂ ಮುನ್ನಲೆಗೆ ಬರಬೇಕಿದೆ ಎಂದರು.

**ಶಿಬಿರದ ಐದನೇ ದಿನ:** ದಿನಾಂಕ 12.03.2020ರ ಗುರುವಾರರಂದು 6.30ಕ್ಕೆ ಸರಿಯಾಗಿ ಧ್ವಜಾರೋಹಣ ಕಾರ್ಯಕ್ರಮವನ್ನು ಆಲಂಗಿರಿಯ ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನದ ಬಿಲ್ ಕಲೆಕ್ಟರ್ ಶ್ರೀ ನಾರಾಯಣಸ್ವಾಮಿ ರವರು ನೆರವೇರಿಸಿದರು.

**ಶ್ರಮದಾನ** : ದಿನಾಂಕ 12.03.2020 ರ ಗುರುವಾರರಂದು ಬಿಟ್ಟಗಾನಹಳ್ಳಿಗೆ ಭೇಟಿ ಕೊಟ್ಟು ಶ್ರಮದಾನ, ಪರಿಸರ ಸಂರಕ್ಷಣೆ, ಸಾಂಕ್ರಾಮಿಕ ರೋಗಗಳ ಬಗ್ಗೆ ಅರಿವು ಮತ್ತು ಸ್ವಚ್ಛತಾ ಕಾರ್ಯಕ್ರಮಗಳನ್ನು ನಿರ್ವಹಿಸಲಾಯಿತು.

**ಉಪನ್ಯಾಸ** : ಸಂಜೆ 4.00 ಗಂಟೆಗೆ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ **"ಸಂವಿಧಾನ ಮತ್ತು ಪೌರತ್ವ"**. ಈ ವಿಷಯದ ಬಗ್ಗೆ ಸಂಪನ್ಮೂಲ ವ್ಯಕ್ತಿಯಾಗಿ ಡಾ. ಅನಿಲ್‌ಕುಮಾರ್ ಎ., ಪ್ರಗತಿಪರ ಚಿಂತಕರು ಮತ್ತು ವೈದರು, ಬಾಗೇಪಲ್ಲಿ, ಇವರು ವಿಶೇಷ ಉಪನ್ಯಾಸ ನೀಡಿದರು.

ಸಂಜೆ 7 ರಿಂದ 9.00 ಗಂಟೆಯವರೆಗೆ ಡಾ. ಆನಂದ್ ಸಿ., ಡಾ. ಸುಕನ್ಯಾ ಎಸ್.ಆರ್., ಪಶುವೈದ್ಯಾಧಿಕಾರಿಗಳು ಮತ್ತು ಅವರ ತಂಡ ಸುಮಾರು 200 ಕೋಳಿಗಳಿಗೆ ಚಿಕಿತ್ಸೆ ನೀಡಿದರು.

**ಶಿಬಿರದ ಆರನೇ ದಿನ** : ದಿನಾಂಕ 13-03-2020 ರ ಶುಕ್ರವಾರ ರಂದು 6-15 ಕ್ಕೆ ಸರಿಯಾಗಿ ಧ್ವಜಾರೋಹಣ ಕಾರ್ಯಕ್ರಮವನ್ನು ಆಲಂಬಗಿರಿಯ ಯುವ ಮುಖಂಡರಾದ ಪ್ರವೀಣ್ ಕುಮಾರ್ ನೆರವೇರಿಸಿದರು

**ಶ್ರಮದಾನ** : ಈ ದಿನ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಚಿಂತಾಮಣಿ, ಇವರ ವತಿಯಿಂದ **"ಪಶು ಆರೋಗ್ಯ ಮತ್ತು ಫಲೀಕರಣ ಶಿಬಿರ"** ಏರ್ಪಡಿಸಲಾಗಿತ್ತು, ಇದರ ನೇತೃತ್ವವನ್ನು ಡಾ. ಬೈರಾರೆಡ್ಡಿ ಕೆ.ಪಿ, ಸಹಾಯಕ ನಿರ್ದೇಶಕರು ಪಶುಪಾಲನಾ ಇಲಾಖೆ ಇವರು ವಹಿಸಿಕೊಂಡಿದ್ದರು. ಡಾ. ವೀರರಾಜು ಎ.ಎಂ., ಡಾ. ಚನ್ನಕೇಶವರೆಡ್ಡಿ, ಡಾ. ಜಯಮಾಲಾ ಡಾ. ಆನಂದ್ ಸಿ., ಡಾ. ಸುಕನ್ಯಾ ಎಸ್.ಆರ್., ಡಾ. ಮಹೇಂದ್ರ ಎ.ಎಂ., ಡಾ. ಮಂಜುನಾಥ್ ಪಶುವೈದ್ಯಾಧಿಕಾರಿಗಳು, ಇವರು ಜಾನುವಾರಗಳಿಗೆ ಸುಮಾರು 150 ಸೀಮೆಹಸು. ಎಮ್ಮೆಗಳಿಗೆ ಗರ್ಭತಪಾಸಣೆ, ಔಷಧೋಪಚಾರ ಮತ್ತು ಸುಮಾರು 200 ಮೇಕೆ ಕುರಿಗಳಿಗೆ ಮತ್ತು ಕರುಗಳಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸೆ ನೀಡಿದರು.

**ಉಪನ್ಯಾಸ ಕಾರ್ಯಕ್ರಮ** : ಪ್ರತಿದಿನದಂತೆ ಈದಿನ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ **"ಮಹಿಳಾ ಸಬಲೀಕರಣ"** ಎಂಬ ವಿಷಯವನ್ನು ಕುರಿತು ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ವಿಜೇತರಾದ **'ಸೌಂದರ್ಯ ಗ್ರಾಮೀಣ ಹಾಗೂ ಪಟ್ಟಣ ಅಭಿವೃದ್ಧಿ ಸಂಸ್ಥೆ'**ಯ ಅಧ್ಯಕ್ಷರಾದ ಡಾ || ಎಂ. ವಿಜಯವೆಂಕಟರಾಂ ಉಪನ್ಯಾಸ ನೀಡಿದರು.

**ಶಿಬಿರದ ಏಳನೇ ದಿನ** : ದಿನಾಂಕ 14-03-2020ರ ಶನಿವಾರ ರಂದು 6.15ಕ್ಕೆ ಸರಿಯಾಗಿ ಧ್ವಜಾರೋಹಣ ಕಾರ್ಯಕ್ರಮವನ್ನು ಕೊಟಾರಿ ನಾರಾಯಣಸ್ವಾಮಿ ಇವರು ನೆರವೇರಿಸಿದರು.

ನಂತರ ಬೆಳಗ್ಗೆ 11 ಗಂಟೆಗೆ ಸರಿಯಾಗಿ ಸಮಾರೋಪ ಸಮಾರಂಭವನ್ನು ಏರ್ಪಡಿಸಲಾಯಿತು. ಸಮಾರೋಪ ಸಮಾರಂಭದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಮುನಗನಹಳ್ಳಿ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಕವಿತ ಅವರು ಈ ಶಿಬಿರದಲ್ಲಿ ಬೆಳೆಸಿಕೊಂಡಿರುವ ಸೇವಾ ಮನೋಭಾವನೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಮಾಜಕ್ಕೆ ಒಳ್ಳೆಯ ಕೊಡುಗೆಯನ್ನು ನೀಡಬೇಕೆಂದು ಹೇಳಿದರು. ಪ್ರಾಂಶುಪಾಲರಾದ ಪ್ರೊ.ಶಿವಶಂಕರ್ ಪ್ರಸಾದ್ ಕೆ.ಆರ್.ರವರು ಶ್ರಮದಾನದಿಂದ ದೈಹಿಕ, ಮಾನಸಿಕ ಆರೋಗ್ಯ ವೃದ್ಧಿಸಿ ಜೀವನದಲ್ಲಿ ಸಂತೋಷವನ್ನು ಅನುಭವಿಸಬಹುದು ಎನ್ನುತ್ತಾ, ಶ್ರಮದಿಂದ ದೊರೆಯುವ ಪ್ರತಿಫಲವೇ ಆರೋಗ್ಯ. ಆದ್ದರಿಂದ ನಾವು ಯಾವುದೇ ಉತ್ತಮ ಕೆಲಸವನ್ನು ಮಾಡುವಾಗ ಸ್ವ ಪ್ರತಿಷ್ಠೆಯನ್ನು ಬಿಡಬೇಕು ಎಂದರು. ಶಿಬಿರಾಧಿಕಾರಿ ಹಾಗೂ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಚಂದ್ರಶೇಖರ ಸಿ. ಅವರು ವಾರ್ಷಿಕ ವಿಶೇಷ ಶಿಬಿರದ ಏಳು ದಿನಗಳ ವರದಿಯನ್ನು ಸವಿವರವಾಗಿ ಓದಿದರು. ಶಿಬಿರಾರ್ಥಿಗಳಾದ ಕುಮಾರಿ ಬೃಂದಾ, ಗೌತಮಿ, ಚೈತ್ರಾ ಮುಂತಾದವರು ತಮ್ಮ ಏಳು ದಿನಗಳ

ಅನುಭವಗಳನ್ನು ಹಂಚಿಕೊಂಡರು. ಘಟಕ-2ರ ಸಹಾಯಕ ಶಿಬಿರಾಧಿಕಾರಿ ಮತ್ತು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ.ಎಲ್. ವಿಜಯೇಂದ್ರಕುಮಾರ್ ರವರು ಎಲ್ಲರನ್ನು ಸ್ವಾಗತಿಸಿ ಕಾರ್ಯಕ್ರವನ್ನು ನಿರೂಪಿಸಿದರು. ಘಟಕ-2ರ ಶಿಬಿರಾಧಿಕಾರಿ ಹಾಗೂ ಗಣಿತಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾಧ ಪ್ರೊ. ರತ್ನಮ್ಮ ಕೆ.ವಿ., ಅವರು ಶಿಬಿರ ಯಶಸ್ವಿಯಾಗಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕಾರಣರಾದ ಎಲ್ಲರಿಗೂ ವಂದನೆಗಳನ್ನು ತಿಳಿಸಿದರು.

ಒಟ್ಟಿನಲ್ಲಿ ನಮ್ಮ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಚಟುವಟಿಕೆಗಳು ಯಶಸ್ವಿಯಾಗಿ ನಡೆಯಲು ಸಲಹೆ ಮತ್ತು ಸಹಕಾರ ನೀಡಿದ ನಮ್ಮ ನೆಚ್ಚಿನ ಪ್ರಾಂಶುಪಾಲರಾದ ಪ್ರೊ. ಶಿವಶಂಕರ್ ಪ್ರಸಾದ್ ಕೆ.ಆರ್. ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳಾದ ಶ್ರೀ ಹರೀಶ್ ಕುಮಾರ್, ಡಾ. ಆದಿನಾರಾಯಣ್ ಎನ್.ಎ. ಅವರ ಸಲಹೆಗಳು, ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯ ಸಂಪರ್ಕಾಧಿಕಾರಿಗಳಾದ ಡಾ. ಗಣನಾಥಶೆಟ್ಟಿ ಎಕ್ಕಾರು ರವರ ಮಾರ್ಗದರ್ಶನ, ರಾ.ಸೇ.ಯೋಜನೆಯ ಸಹಾಯಕ ಕಾರ್ಯಕ್ರಮ ಸಲಹೆಗಾರರಾದ ಕೆ.ವಿ. ಖಾದ್ರಿ ನರಸಿಂಹಯ್ಯ ಅವರಿಗೆ, ಕಾಲೇಜಿನ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ, ಎನ್.ಎಸ್.ಎಸ್. ಸಲಹಾ ಸಮಿತಿಯ ಸದಸ್ಯರಿಗೆ ವಿಶೇಷವಾದ ಧನ್ಯವಾದಗಳು ಮತ್ತು ನನ್ನ ನೆಚ್ಚಿನ ಎನ್.ಎಸ್.ಎಸ್. ಸ್ವಯಂ ಸೇವಕಿಯರಿಗೆ ಎನ್.ಎಸ್.ಎಸ್. ಘಟಕದ ಪರವಾಗಿ ಧನ್ಯವಾದಗಳು.